ಕೂಡ ವಿರೋಧಪಕ್ಷದ ನಾಯಕರಾದ ನಾಣಯ್ಯನವರು ಕೂಡ ಹೇಳಿದ್ದಾರೆ. ಈ ವಿಚಾರವನ್ನು ಸರ್ಕಾರ ಗಮನದಲ್ಲಿ ಸೀರಿಯಸ್ಸಾಗಿ ಇಟ್ಟುಕೊಂಡಿದೆ ಇಂಟರೆಸ್ಟ್ ಸಬ್ಸಿಡಿ ವಿಚಾರ. ಕೊನೇ ಪಕ್ಷ ಅದು ಮಾಡಿದರೆ ಕೂಡ ಉಪಯೋಗ ಬೀಳಬಹುದು ರೈತರಿಗೆ ಎಂದು. ಅದನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಅದರ ಬಗ್ಗೆ ಏನು ಮಾಡಬೇಕೆಂದು ಎಂಬ ಬಗ್ಗೆ ನಾವು ಸೂಕ್ತ ಕಾಲದಲ್ಲಿ ತೀರ್ಮಾನ ಮಾಡುತ್ತೇವೆ. ಇಷ್ಟು ಬಿಟ್ಟರೆ ಬೇರೆ ಏನೂ ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ಶ್ರೀ ಏಕಾಂತಯ್ಯನವರೆ, ನಿಮ್ಮ ರೆಸಲ್ಯೂಷನ್ ಮೂವ್ ಮಾಡಿ..

ಶ್ರೀ ಬಿ.ಎಸ್. ಯಡಿಯೂರಪ್ಪ : ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಿದರೆ ನಮ್ಮ ಒಪ್ಪಿಗೆ ಇಲ್ಲ. ರೈತರ ಹತ್ತು ಸಾವಿರ ರೂಪಾಯಿ ಸಾಲ ಮನ್ನಾ ಮಾಡುತ್ತೇವೆ ಎಂದು ಲೋಕಸಭೆ ಚುನಾವಣೆ ಕಾಲದಲ್ಲಿ ನೀವು ಹೇಳಿದ್ದೀರಿ. ಅದನ್ನು ಇಂಪ್ಲಿಮೆಂಟ್ ಮಾಡಬೇಕು. ಈಗ ಈ ರೈತ ವಿರೋಧಿ ನೀತಿಯನ್ನು ಪ್ರತಿಭಟನೆ ಮಾಡಿ ನಾವು ವಾಕ್ ಔಟ್ ಮಾಡುತ್ತಿದ್ದೇವೆ. ಈಗ ಎಲ್ಲಾ ಕಡೆ ರೈತರ ಆಸ್ತಿ ಜಪ್ತಿ ನಡೆಯುತ್ತಿದೆ.

(ಶ್ರೀ ಯಡಿಯೂರಪ್ಪನವರು ತಮ್ಮ ಸ್ಥಾನ ಬಿಟ್ಟು ಮಾತನಾಡುತ್ತಾ ಸಭಾತ್ಯಾಗ ಮಾಡಿದರು. ಇತರ ಭಾರತೀಯ ಜನತಾ ಪಕ್ಷದ ನಾಯಕರೂ ಅವರನ್ನು ಹಿಂಬಾಲಿಸಿದರು)

ಶ್ರೀ ಎಚ್. ಏಕಾಂತಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ...

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ನಾನು ಒಂದೇ ಒಂದು ವಿಚಾರ ಹೇಳುವುದು, ಭಾರತೀಯ ಜನತಾ ಪಕ್ಷದ ಮಿತ್ರರು ರೈತರ ಬಗ್ಗೆ ಕಳಕಳಿ ಇಟ್ಟುಕೊಳ್ಳುವ ಹಕ್ಕು ಅವರಿಗೆ ಇಲ್ಲ ಎಂದು ನಾನು ಹೇಳುತ್ತಿಲ್ಲ. ಎಲ್ಲರಿಗೂ ಹಕ್ಕಿದೆ ಈ ದೇಶದಲ್ಲಿ ಎಂಬ ವಿಚಾರವನ್ನು ಮೂಲತಃ ಗಮನದಲ್ಲಿಟ್ಟೇ ಒಂದು ಮಾತು ಹೇಳುತ್ತಿದ್ದೇನೆ. ಆದರೆ ಆ ಭಾರತೀಯ ಜನತಾ ಪಕ್ಷದ ಚರಿತ್ರೆ ಇದೆಯಲ್ಲ, ಅದನ್ನು ನೋಡಿದರೆ ಅದು ಸಂಪೂರ್ಣವಾಗಿ ರೈತರಿಗೆ ವಿರೋಧವಾಗಿರತಕ್ಕ ಅವರ ನೀತಿ ಮೊದಲಿನಿಂದರೂ ಬಂದಿದೆ. ನಾನು ಅದು ಹೇಳಬಾರದು ಎಂದರೂ ಕೂಡ ಒಂದೇ ಸಾರಿ ಇವರು ಬದಲಾವಣೆ ಮಾಡಿ ರೈತರಿಗೋಸ್ಕರವೇ ಈ ಪಕ್ಷ ಹುಟ್ಟಿದೆಯೋ ಏನೋ ಎಂಬ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಈ ದೇಶದಲ್ಲಿ ಉಳಿದಿರತಕ್ಕ ರಾಜಕೀಯ ಪಕ್ಷಗಳು ಕಾಂಗ್ರೆಸ್ ಇರಬಹುದು ಅಥವಾ ದಳ ಇರಬಹುದು. ಯಾರೂ ರೈತರ ಪರವಾಗಿ ಇಲ್ಲವೇನೋ ಎಂಬ ಭಾವನೆಯಲ್ಲಿ ಪದೇ ಪದೇ ವಿಚಾರ ಎತ್ತುವುದು ಸಭಾತ್ಯಾಗ ಮಾಡುವುದು. ಎಷ್ಟು ಸಾರಿ ಈ ವಿಚಾರ ಎತ್ತಿದರು, ಎಷ್ಟು ಸಾರಿ ಸಭಾತ್ಯಾಗ ಮಾಡಿದರು? ಆದರೆ ಒಂದು ನನಗೆ ಗೊತ್ತಿದೆ. ಕರ್ನಾಟಕ ರಾಜ್ಯದ ರೈತರ ಪರವಾಗಿ ನಮ್ಮ ಸರ್ಕಾರ ಸ್ಪಷ್ಟವಾಗಿದೆ. ಹಲವಾರು ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಇನ್ನೂ ಕೂಡ ತೆಗೆದುಕೊಳ್ಳುವುದಿದೆ. ರೈತರ ಪರವಾಗಿ ಇರತಕ್ಕ ನಮ್ಮ ನೀತಿಯಲ್ಲಿ ಬದಲಾವಣೆ ಮಾಡಿಲ್ಲ, ನಾವು ಮಾಡುವುದಿಲ್ಲ. ಈ ಮಾತನ್ನು ಸ್ಪಷ್ಟಪಡಿಸುತ್ತೇನೆ. ಇವತ್ತು ಭಾರತೀಯ ಜನತಾ ಪಕ್ಷದ ಮಿತ್ರರು ಮಾಡುವುದೇನಿದೆ, ಇದು ರಾಜಕೀಯ ಬಿಟ್ಟರೆ ಇನ್ನೇನೂ ಇಲ್ಲ. ಇವರ ಬಂಡವಾಳ ಬೇರೆ ಬೇರೆ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಕಡೆ ಏನು ಎಂಬುದು